<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲುಃ- **Sri. P.M.** ವಕೀಲರಿಂದ ಆರೋಪಿಯ ಪರವಾಗಿ</u>

17. ದಿಃ15.09.2024ರಂದು ನನ್ನ ಮನೆಗೆ ಬಂದು ಆರೋಪಿಯು ಹಣ ಕೇಳಿರುತ್ತಾರೆ. ಅವರು ರೂ.10 ಲಕ್ಷ ಹಣವನ್ನು ಸಾಲವಾಗಿ ಕೇಳಿರುತ್ತಾರೆ, ಆದರೆ ನನ್ನ ಬಳಿ ಇರಲಿಲ್ಲ, ಹಾಗಾಗಿ ರೂ.7.5 ಲಕ್ಷ ಹಣವನ್ನು ಸಾಲವಾಗಿ ನೀಡಿರುತ್ತೇನೆ. ನಾನು ನನ್ನ ಚಿನ್ನವನ್ನು ಅಡವಿಟ್ಟು ಆರೋಪಿಗೆ ಹಣ ನೀಡಿರುತ್ತೇನೆ. ನಾನು ಒಂದು ಜಾಗ ತೆಗೆಯುವ ವಿಚಾರವಾಗಿ ಸಿಕ್ಕಿಬಿದಿದ್ದೇನೆ, ಹಾಗಾಗಿ ಹಣ ಬೇಕು ಎಂದು ಆರೋಪಿ ಹಣ ಕೇಳಿರುತ್ತಾರೆ. ಆದರೆ ಆ ಸಮಯದಲ್ಲಿ ಯಾವುದೇ ಕರಾರನ್ನು ಮಾಡಿಕೊಂಡಿರುವುದಿಲ್ಲ. ನಾನು ರೂ.7.5ಲಕ್ಷಕ್ಕೆ ಒಡವೆಗಳನ್ನು ಮಡ್ಯಾಂತರಿನಲ್ಲಿ ಅಡ ಇಟ್ಟಿರುತ್ತೇನೆ. ಆ ಪೈಕಿ ಆರೋಪಿಯು ನನಗೆ ರೂ.1.5 ಲಕ್ಷ ಹಣವನ್ನು ಪಾವತಿಸಿರುತ್ತಾರೆ. ಆದರೆ ಆ ರೀತಿ ಮರುಪಾವತಿ ಮಾಡಿದ ದಿನಾಂಕ ನೆನಪಿಲ್ಲ. ಆರೋಪಿಗೆ ನಾನು ಸಾಲ ನೀಡುವಾಗ ಅಥವಾ ಆರೋಪಿಯು ನನಗೆ ಮೇಲೆ ಹೇಳಿದ ಮೊತ್ತವನ್ನು ಪಾವತಿ ಮಾಡುವಾಗ ನನ್ನ ತಂದೆಯವರು ಹಾಜರಿದ್ದರು. ಚಿನ್ನವನ್ನು ಅಡವಿಟ್ಟ ಬಗ್ಗೆ ನನ್ನ ಬಳಿ ದಾಖಲಾತಿ ಇದೆ. ನಿಪಿ-1ರ ಚೆಕ್ಕು ಆರೋಪಿಯ ಸಹಿ ಸರಿ ಇಲ್ಲ ಎಂಬ ಕಾರಣಕ್ಕೆ ಅಮಾನ್ಯವಾಗಿದೆ ಎಂದರೆ ಸರಿ. ದಿಃ19.03.2025ರಂದು ಆರೋಪಿಯು ನಿಪಿ-1ರ ಚೆಕ್ಕನ್ನು ನೀಡಿರುತ್ತಾರೆ. ನಿಪಿ-1ರ ಬರವಣಿಗೆಯನ್ನು ನಾನು ಮಾಡಿರುವುದಿಲ್ಲ. ನಿಪಿ-1ರ ಸಹಿ ಹಾಗೂ ಇತರೆ ಬರವಣಿಗೆಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1(ಎ) ಹಾಗೂ ನಿಪಿ-5ರಲ್ಲಿರುವ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ವಕೀಲರ ಮೂಲಕ ನೀಡಿದ ನೋಟೀಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ-1(ಎ) ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೇ ಹಣ ಪಡೆದಿಲ್ಲ ಹಾಗೂ ಅದರ ಮರುಪಾವತಿಗೆ ಯಾವುದೇ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ